# ದೂರಶಿಕ್ಷಣ ನಿರ್ದೇಶನಾಲಯ

## ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ,
ದೂರವಾಣಿ ೦೮೩೯೪-೨೪೧೯೮೧, ೨೧೦೨೦೦, ಫ್ಯಾಕ್ಸ್ ೦೮೩೯೪-೨೪೧೯೮೧
ಇ-ಮೇಲ್ : dde.kuh@gmail.com


ಸಂಖ್ಯೆ:ಕವಿಹಂ:ದೂಶಿನಿ:ಸಂತ:2016–17/2017–18 ದಿನಾಂಕ. 30.06.2017

### ಸೂಚನೆ

2016–17ನೇ ಶೈಕ್ಷಣಿಕ ಸಾಲಿನ **ಎಂ.ಎ. ಚರಿತ್ರೆ ಪ್ರಥಮ** ವರ್ಷದ ವಿದ್ಯಾರ್ಥಿಗಳಿಗೆ ಈ ಮೂಲಕ ಸೂಚಿಸುವುದೇನೆಂದರೆ, ಕೋರ್ಸ್‌ನ ಪ್ರತಿ ಪತ್ರಿಕೆಯ ಎರಡು ಸ್ವಲಿಖಿತ ಎ4 ಅಳತೆಯ 10 ಪುಟಗಳ ಗೃಹಲೇಖನಗಳನ್ನು ಸಿದ್ಧಪಡಿಸಿ **ದಿನಾಂಕ 30.07.2017ರ** ಒಳಗೆ ಸಲ್ಲಿಸಬೇಕು. ವಿವಿಧ ಅಧ್ಯಯನ ಮತ್ತು ವಿಸ್ತರಣ ಕೇಂದ್ರಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಆಯಾ ಅಧ್ಯಯನ ಮತ್ತು ವಿಸ್ತರಣ ಕೇಂದ್ರಗಳ ಮುಖ್ಯಸ್ಥರ ಮೂಲಕ ಸಲ್ಲಿಸುವುದು. ರೂ. 200.00ಗಳ **ದಂಡಸಹಿತ ಗೃಹಲೇಖನವನ್ನು ಸಲ್ಲಿಸಲು 10.08.2017**ರವರೆಗೆ ಕಾಲಾವಕಾಶ ಇರುತ್ತದೆ. ತಡವಾಗಿ ಸಲ್ಲಿಸಿದ ಗೃಹಲೇಖನಗಳನ್ನು ಮೌಲ್ಯಮಾಪನಕ್ಕೆ ಒಳಪಡಿಸಲಾಗುವುದಿಲ್ಲ ಮತ್ತು ಸಕಾಲದಲ್ಲಿ ಗೃಹಲೇಖನಗಳನ್ನು ಸಲ್ಲಿಸದಿದ್ದಲ್ಲಿ ಈ ಸಂಬಂಧದ ಆಂತರಿಕ ಅಂಕಗಳನ್ನು ನೀಡದೆ ಫಲಿತಾಂಶ ಪ್ರಕಟಿಸಲಾಗುವುದು. ಈ ಕೆಳಗಿನ ಐದು ಪತ್ರಿಕೆಗಳಲ್ಲಿ ಪ್ರತಿಯೊಂದರಲ್ಲೂ ನಾಲ್ಕು ಪ್ರಶ್ನೆಗಳನ್ನು ಕೊಡಲಾಗಿದೆ. ಇವುಗಳಲ್ಲಿ ಪ್ರತಿ ಪತ್ರಿಕೆಯಲ್ಲಿಯೂ ಎರಡು ವಿಷಯ ಕುರಿತು ಕಡ್ಡಾಯವಾಗಿ ಪ್ರತಿಯೊಂದು ಪ್ರಶ್ನೆಗೂ ಕನಿಷ್ಠ 10 ಪುಟಗಳ ಲೇಖನ ಬರೆಯಬೇಕು. ಪ್ರತಿಯೊಂದು ಪತ್ರಿಕೆಗೂ 10 ಅಂಕಗಳು ಇರುತ್ತವೆ. ಐದು ಪತ್ರಿಕೆಗಳಿಗೆ ಒಟ್ಟು 50 ಅಂಕಗಳು. ಸಂಪರ್ಕ ತರಗತಿಗಳಿಗೆ ಹಾಜರಾಗಿದ್ದು, ತೃಪ್ತಿದಾಯಕ ಹಾಜರಾತಿ ಪಡೆಯದೇ ಇರುವ ವಿದ್ಯಾರ್ಥಿಗಳು ಸಹ ಗೃಹಲೇಖನಗಳನ್ನು ಸಲ್ಲಿಸಲು ಅವಕಾಶವಿರುತ್ತದೆ.

**ವಿಳಾಸ: ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ 583 276.**

**ಗೃಹಲೇಖನದ ಪ್ರಶ್ನೆಗಳು**

**ಕೋರ್ಸ್ (ಪತ್ರಿಕೆ) – 1 : ಚರಿತ್ರೆ ಲೇಖನ ಪರಂಪರೆ**

1. ಚರಿತ್ರೆಕಾರರಾಗಿ ಲಿವಿ ಮತ್ತು ಟ್ಯಾಸಿಟಿರ್ಸ್ ಹಿರಿಮೆಯನ್ನು ಚರ್ಚಿಸಿರಿ.
2. ಚರಿತ್ರೆ ಬರವಣಿಗೆಯ ಮೇಲೆ ಪುನರುಜ್ಜೀವನ ಚಳವಳಿಯ ಪ್ರಭಾವವನ್ನು ಗುರುತಿಸಿ.
3. ವೈಜ್ಞಾನಿಕ ಚರಿತ್ರೆ ಲೇಖನ ಪರಂಪರೆಗೆ ರ‍್ಯಾಂಕೆಯ ಕೊಡುಗೆಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ.
4. ವಸಾಹತು ಶಾಹಿ ಚರಿತ್ರೆ ಲೇಖನ ಪರಂಪರೆಯನ್ನು ಕುರಿತು ವಿಮರ್ಶಾತ್ಮಕ ಟಿಪ್ಪಣಿ ಬರೆಯಿರಿ.

**ಕೋರ್ಸ್ (ಪತ್ರಿಕೆ) – 2 : ಪಾಶ್ಚಿಮಾತ್ಯ ನಾಗರಿಕತೆ**

1. ಗ್ರೀಕ್ ಜನರ ಸಾಮಾಜಿಕ ಜೀವನವನ್ನು ಚಿತ್ರಿಸಿ.
2. ನವೋದಯ ಕಾಲದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಿಗೆ ಉಂಟಾದ ಕೊಡುಗೆಗಳನ್ನು ಚರ್ಚಿಸಿ.
3. ಕೈಗಾರಿಕಾ ಕ್ರಾಂತಿಯ ಯುರೋಪಿನ ಸಾಮ್ರಾಜ್ಯಶಾಹಿ ವಿಸ್ತರಣೆಗೆ ಹೇಗೆ ಅವಕಾಶ ಮಾಡಿತು ಎಂಬುವುದನ್ನು ವಿವರಿಸಿ.
4. ಅಮೇರಿಕವು ಏಕಮಾತ್ರ ಸೂಪರ್ ಪವರ್ ಆಗಲು ಸೋವಿಯತ್ ಒಕ್ಕೂಟದ ಅವನತಿಯು ಕಾರಣವಾಗಿದೆಯೆ? ಚರ್ಚಿಸಿ.

**ಕೋರ್ಸ್ (ಪತ್ರಿಕೆ) – 3 : ಭಾರತೀಯ ಚರಿತ್ರೆ: ಆಯ್ದ ವಿಷಯಗಳು**

1. ಹರಪ್ಪ ಸಂಸ್ಕೃತಿಯ ಅವನತಿಯ ಕುರಿತು ವಾದಗಳನ್ನು ಬರೆಯಿರಿ.
2. ಅಶೋಕನ ಧರ್ಮದ ವಿಭಿನ್ನ ಅಂಶಗಳನ್ನು ಚರ್ಚಿಸಿರಿ.
3. ಪ್ರಾಚೀನ ಭಾರತದಲ್ಲಿ ಸ್ತ್ರೀಯರ ಸ್ಥಾನಮಾನದ ಕುರಿತು ಒಂದು ಟಿಪ್ಪಣಿ ಬರೆಯಿರಿ.
4. ದೆಹಲಿ ಸುಲ್ತಾನರ ಭೂಕಂದಾಯ ವ್ಯವಸ್ಥೆಯನ್ನು ವಿವರಿಸಿ.

**ಕೋರ್ಸ್ (ಪತ್ರಿಕೆ) – 4 : ದಕ್ಷಿಣ ಭಾರತದ ಚರಿತ್ರೆ: ಆಯ್ದ ವಿಷಯಗಳು**

1. ದಕ್ಷಿಣದಲ್ಲಿ ವಿಸ್ತರಣೆಗೊಂಡಿದ್ದ ಅಶೋಕನ ಸಾಮ್ರಾಜ್ಯ ಹಾಗೂ ಅವನ ಶಾಸನಗಳ ಕುರಿತು ಬರೆಯಿರಿ.
2. ವಿಜಯನಗರ ಕಾಲದ ಪ್ರಮುಖ ದೇವಾಲಯಗಳು ಹಾಗೂ ಅವುಗಳ ಲಕ್ಷಣಗಳನ್ನು ಕುರಿತು ಚರ್ಚಿಸಿ.
3. ಮೈಸೂರಿನ ಮಿಲ್ಲರ್ ವರದಿಯ ಕುರಿತು ವಿಶ್ಲೇಷಣಾತ್ಮಕ ಪ್ರಬಂಧವನ್ನು ಬರೆಯಿರಿ.
4. ಭಾಷಾವಾರು ಪ್ರಾಂತ್ಯಗಳ ರಚನೆಯ ಕುರಿತಾಗಿ ಭಾರತ ಸರಕಾರವು ನೇಮಿಸಿದ ಆಯೋಗಗಳ ಕುರಿತು ಚರ್ಚಿಸಿರಿ.

**ಕೋರ್ಸ್ (ಪತ್ರಿಕೆ) – 5 : ಕರ್ನಾಟಕ ಚರಿತ್ರೆ: ಆಯ್ದ ವಿಷಯಗಳು**

1. ವರ್ತಕ ಸಮುದಾಯಗಳ ವಿಭಿನ್ನ ಆಯಾಮಗಳನ್ನು ಅವಲೋಕಿಸಿ.
2. ಕರ್ನಾಟಕದಲ್ಲಿ ಬೆಳೆದು ಬಂದ ಸೂಫಿ ಪಂಥವನ್ನು ವಿವರಿಸಿ.
3. 1857 ರ ದಂಗೆಗೆ ಪೂರಕವಾಗಿ ಕರ್ನಾಟಕದಲ್ಲಿ ನಡೆದ ದಂಗೆಗಳನ್ನು ವಿವರಿಸಿ.
4. ಕರ್ನಾಟಕದಲ್ಲಿ 1970ರ ನಂತರ ಉಗಮಗೊಂಡ ದಲಿತ ಚಳವಳಿಯನ್ನು ವಿಶ್ಲೇಷಿಸಿ.

ನಿರ್ದೇಶಕರು

E:dde:contact16-17/assrments/6

PDF created with pdfFactory trial version www.pdffactory.com

# ದೂರಶಿಕ್ಷಣ ನಿರ್ದೇಶನಾಲಯ
# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ,
ದೂರವಾಣಿ ೦೮೩೯೪-೨೪೧೯೮೧, ೨೧೦೨೦೦, ಫ್ಯಾಕ್ಸ್ ೦೮೩೯೪-೨೪೧೯೮೧
ಇ-ಮೇಲ್ : dde.kuh@gmail.com


ಸಂಖ್ಯೆ:ಕವಿಹಂ:ದೂಶಿನಿ:ಸಂಶ:2016-17/2017-18 ದಿನಾಂಕ. 30.06.2017

## ಸೂಚನೆ

2016-17ನೇ ಶೈಕ್ಷಣಿಕ ಸಾಲಿನ **ಎಂ.ಎ. ಚರಿತ್ರೆ ಅಂತಿಮ** ವರ್ಷದ ವಿದ್ಯಾರ್ಥಿಗಳಿಗೆ ಈ ಮೂಲಕ ಸೂಚಿಸುವುದೇನೆಂದರೆ, ಕೋರ್ಸ್‌ನ ಪ್ರತಿ ಪತ್ರಿಕೆಯ ಎರಡು ಸ್ವಲಿಖಿತ ಎ4 ಅಳತೆಯ 10 ಪುಟಗಳ ಗೃಹಲೇಖನಗಳನ್ನು ಸಿದ್ಧಪಡಿಸಿ **ದಿನಾಂಕ 30.07.2017**ರ ಒಳಗೆ ಸಲ್ಲಿಸಬೇಕು. ವಿವಿಧ ಅಧ್ಯಯನ ಮತ್ತು ವಿಸ್ತರಣ ಕೇಂದ್ರಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಆಯಾ ಅಧ್ಯಯನ ಮತ್ತು ವಿಸ್ತರಣ ಕೇಂದ್ರಗಳ ಮುಖ್ಯಸ್ಥರ ಮೂಲಕ ಸಲ್ಲಿಸುವುದು. ರೂ. 200.00ಗಳ **ದಂಡಸಹಿತ ಗೃಹಲೇಖನವನ್ನು ಸಲ್ಲಿಸಲು 10.08.2017**ರವರೆಗೆ ಕಾಲಾವಕಾಶ ಇರುತ್ತದೆ. ತಡವಾಗಿ ಸಲ್ಲಿಸಿದ ಗೃಹಲೇಖನಗಳನ್ನು ಮೌಲ್ಯಮಾಪನಕ್ಕೆ ಒಳಪಡಿಸಲಾಗುವುದಿಲ್ಲ ಮತ್ತು ಸಕಾಲದಲ್ಲಿ ಗೃಹಲೇಖನಗಳನ್ನು ಸಲ್ಲಿಸದಿದ್ದಲ್ಲಿ ಈ ಸಂಬಂಧದ ಆಂತರಿಕ ಅಂಕಗಳನ್ನು ನೀಡದೆ ಫಲಿತಾಂಶ ಪ್ರಕಟಿಸಲಾಗುವುದು. ಈ ಕೆಳಗಿನ ಐದು ಪತ್ರಿಕೆಗಳಲ್ಲಿ ಪ್ರತಿಯೊಂದರಲ್ಲೂ ನಾಲ್ಕು ಪ್ರಶ್ನೆಗಳನ್ನು ಕೊಡಲಾಗಿದೆ. ಇವುಗಳಲ್ಲಿ ಪ್ರತಿ ಪತ್ರಿಕೆಯಲ್ಲಿಯೂ ಎರಡು ವಿಷಯ ಕುರಿತು ಕಡ್ಡಾಯವಾಗಿ ಪ್ರತಿಯೊಂದು ಪ್ರಶ್ನೆಗೂ ಕನಿಷ್ಠ 10 ಪುಟಗಳ ಲೇಖನ ಬರೆಯಬೇಕು. ಪ್ರತಿಯೊಂದು ಪತ್ರಿಕೆಗೂ 10 ಅಂಕಗಳು ಇರುತ್ತವೆ. ಐದು ಪತ್ರಿಕೆಗಳಿಗೆ ಒಟ್ಟು 50 ಅಂಕಗಳು. ಸಂಪರ್ಕ ತರಗತಿಗಳಿಗೆ ಹಾಜರಾಗಿದ್ದು, ತೃಪ್ತಿದಾಯಕ ಹಾಜರಾತಿ ಪಡೆಯದೇ ಇರುವ ವಿದ್ಯಾರ್ಥಿಗಳು ಸಹ ಗೃಹಲೇಖನಗಳನ್ನು ಸಲ್ಲಿಸಲು ಅವಕಾಶವಿರುತ್ತದೆ.

**ವಿಳಾಸ: ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ 583 276.**

### ಗೃಹಲೇಖನದ ಪ್ರಶ್ನೆಗಳು

**ಕೋರ್ಸ್ (ಪತ್ರಿಕೆ) – 6 : ಚರಿತ್ರೆ ಸಂಶೋಧನಾ ವಿಧಾನಗಳು**

1. ಅನ್ಯಜ್ಞಾನ ಶಿಸ್ತುಗಳ ಮೂಲಕ ಚರಿತ್ರೆಯನ್ನು ಸಮೀಕರಿಸಬಹುದೆ? ನಿಮ್ಮ ಮಾತಿನಲ್ಲಿ ಚರ್ಚಿಸಿ.
2. ಇತಿಹಾಸ ರಚನೆಯಲ್ಲಿ ವಸ್ತು ನಿಷ್ಠತೆಯನ್ನು ಸಾಧಿಸಬಹುದೇ? ನಿಮ್ಮ ಉತ್ತರವನ್ನು ಸಮರ್ಥಿಸಿ.
3. ಇತಿಹಾಸ ಸಂಶೋಧನೆಯಲ್ಲಿ "ಊಹೆ"ಯ ಪ್ರಾಮುಖ್ಯತೆ ಬಗೆಗೆ ವಿಮರ್ಶಿಸಿ.
4. ಆಕರ ಸಂಗ್ರಹಣ ಮತ್ತು ಕ್ಷೇತ್ರಕಾರ್ಯ ಸಂಶೋಧನೆಯಲ್ಲಿ ನಿರ್ವಹಿಸುವ ಪಾತ್ರವೇನು?

**ಕೋರ್ಸ್ (ಪತ್ರಿಕೆ) – 7 : ಪಾಶ್ಚಿಮಾತ್ಯ ನಾಗರಿಕತೆ ಆಯ್ದ ವಿಷಯಗಳು**

1. ಗುಲಾಮಗಿರಿಯ ವಿರುದ್ಧ ಲಿಂಕನ್ ನಡೆಸಿದ ಹೋರಾಟವನ್ನು ವಿಶ್ಲೇಷಿಸಿ.
2. ರಷ್ಯಾದ ಕ್ರಾಂತಿಯ ಪ್ರಮುಖ ಘಟನೆಗಳನ್ನು ತಿಳಿಸಿ.
3. ಆಫ್ರಿಕಾದ ರಾಷ್ಟ್ರಗಳು ಸ್ವತಂತ್ರ್ಯಕ್ಕಾಗಿ ನಡೆಸಿದ ಹೋರಾಟವನ್ನು ವಿವರಿಸಿ.
4. ಬಹುರಾಷ್ಟ್ರೀಯ ಕಂಪನಿಗಳು ಅನಭಿವೃದ್ಧ ದೇಶಗಳನ್ನು ನಿಯಂತ್ರಿಸುವ ಬಗೆಯನ್ನು ವಿಶ್ಲೇಷಿಸಿ.

**ಕೋರ್ಸ್ (ಪತ್ರಿಕೆ) – 8 : ಏಷ್ಯ : ವಸಾಹತುಶಾಹಿ ಮತ್ತು ರಾಷ್ಟ್ರೀಯತೆ**

1. ಆಧುನಿಕ ಪಶ್ಚಿಮ ಏಷ್ಯಾದ ಇತಿಹಾಸದಲ್ಲಿ ಸದ್ದಾಂ ಹುಸೇನ ಸ್ಥಾನವನ್ನು ಗುರುತಿಸಿ.
2. ಮಾವೋತ್ಸೆ ತುಂಗರ ರಾಜಕೀಯ ಹಾಗೂ ಆರ್ಥಿಕ ಸಿದ್ಧಾಂತಗಳನ್ನು ಚರ್ಚಿಸಿರಿ.
3. ಶ್ರೀಲಂಕಾದಲ್ಲಿ ಜನಾಂಗೀಯ ಕಲಹದ ಹಿನ್ನೆಲೆ ಹಾಗೂ ಪರಿಣಾಮಗಳ ಕುರಿತು ಬರೆಯಿರಿ.
4. ಫಿಲಿಪೈನ್ಸ್‌ನಲ್ಲಿ ನಡೆದ ರಾಷ್ಟ್ರೀಯವಾದಿ ಹೋರಾಟದ ಕಾರಣಗಳು ಹಾಗೂ ಸ್ವರೂಪದ ಬಗ್ಗೆ ಬರೆಯಿರಿ.

**ಕೋರ್ಸ್ (ಪತ್ರಿಕೆ) – 9 : ಆಧುನಿಕ ಭಾರತ ಆಯ್ದ ವಿಷಯಗಳು**

1. 1857 ರ ಪ್ರತಿರೋಧವನ್ನು ಕುರಿತ ವಾದಗಳನ್ನು ಮೂಡಿಸಿ.
2. ತೆಲಂಗಾಣ ದಂಗೆಯ ಸಂಕೀರ್ಣತೆಯನ್ನು ವಿಶ್ಲೇಷಿಸಿ.
3. ಪ್ರಜಾಪ್ರಭುತ್ವವು ಭಾರತದಲ್ಲಿ ಗಟ್ಟಿಯಾಗಿ ನೆಲೆಯೂರಿದೆ. ಈ ಹೇಳಿಕೆಯನ್ನು ಕುರಿತಂತೆ ತಮ್ಮ ವಿಚಾರಗಳನ್ನು ಮಂಡಿಸಿ.
4. ರಾಷ್ಟ್ರೀಯ ಹೋರಾಟದಲ್ಲಿ ಕ್ರಾಂತಿಕಾರಕ ಹೋರಾಟಗಳ ಮಹತ್ವವೇನೆ.

**ಕೋರ್ಸ್ (ಪತ್ರಿಕೆ) – 10 : ವಿಜಯನಗರ**

1. ವಿಜಯನಗರ ಚರಿತ್ರೆಗೆ ಸಂಬಂಧಿಸಿದ ಇತ್ತೀಚಿನ ಅಧ್ಯಯನಗಳನ್ನು ವಿಶ್ಲೇಷಿಸಿರಿ.
2. ವಿಜಯನಗರ ಸಾಮ್ರಾಜ್ಯದ ಪತನಕ್ಕೆ ಕಾರಣವಾದ ಅಂಶಗಳನ್ನು ವಿವರಿಸಿರಿ.
3. ವಿಜಯನಗರ ಕಾಲದ ಕೃಷಿ ಹಾಗೂ ವ್ಯಾಪಾರ ವ್ಯವಸ್ಥೆಯ ಕುರಿತು ಬರೆಯಿರಿ.
4. ವಿಜಯನಗರೋತ್ತರ ಕಾಲದ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸಿರಿ.

ನಿರ್ದೇಶಕರು

E:dde:contact16-17/assrments/7

PDF created with pdfFactory trial version www.pdffactory.com